# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 536

ಸದಸ್ಯರ ಹೆಸರು : ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 13.12.2018.

ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು.

<table>
<tr><th>ಕ್ರಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳು ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು: ಕಾರ್ಯನಿರ್ವಹಿಸುತ್ತಿರುವ ಬೋಧಕ ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು: (ವಿವರ ನೀಡುವುದು)</td><td>ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ : 4676.<br>ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ :1231.<br><table><tr><td>ಪ್ರೌಢ ಶಾಲೆಗಳಲ್ಲಿ ಬೋಧಕ ಸಿಬ್ಬಂದಿಗಳ ಸಂಖ್ಯೆ</td><td>ಪ್ರೌಢ ಶಾಲೆಗಳಲ್ಲಿ ಬೋಧಕೇತರ ಸಿಬ್ಬಂದಿಗಳ ಸಂಖ್ಯೆ</td></tr><tr><td>46860</td><td>7303</td></tr><tr><td>ಪ.ಪೂ. ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿಗಳ ಸಂಖ್ಯೆ</td><td>ಪ.ಪೂ. ಕಾಲೇಜುಗಳಲ್ಲಿ ಬೋಧಕೇತರ ಸಿಬ್ಬಂದಿಗಳ ಸಂಖ್ಯೆ</td></tr><tr><td>10375</td><td>1064</td></tr></table></td></tr>
<tr><td>ಆ)</td><td>70 ವಿದ್ಯಾರ್ಥಿಗಳಿಗೆ 01 ವಿಭಾಗ, ಪದವಿ ಪೂರ್ವ ಕಾಲೇಜುಗಳಲ್ಲಿ 80 ವಿದ್ಯಾರ್ಥಿಗಳಿಗೆ 01 ವಿಭಾಗ. ಅದನ್ನು ಪುನರ್ ಪರಿಶೀಲಿಸಿ 40 ವಿದ್ಯಾರ್ಥಿಗಳಿಗೆ 01 ವಿಭಾಗ ಮಾಡುವ ಬಗೆಗಿನ ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಮುಖ್ಯ ಗುರುಗಳ ಹುದ್ದೆ ಸೃಷ್ಟಿಸಿ ಪ್ರಭಾರ ಭತ್ಯೆ ನೀಡುವ ಅಥವಾ ಪೂರ್ಣಾವಧಿ ಮುಖ್ಯಗುರುಗಳ ನೇಮಕ ಮಾಡುವ ಬಗೆಗಿನ. ನಿಂತು ಹೋದ ಪದೋನ್ನತಿ ತಕ್ಷಣ ಕೊಡುವ ಬಗೆಗಿನ. ವರ್ಗಾವಣೆ ಕ್ರಮ ಕೈಗೊಳ್ಳುವ ಬಗೆಗಿನ. ಅನ್ಯ ಕಾರ್ಯಗಳಿಂದ ಶಿಕ್ಷಕರಿಗೆ ವಿಮುಕ್ತಿಗೊಳಿಸುವ ಬಗೆಗಿನ. ದಿ:01.08.2008 ರ ನಂತರ ನೇಮಕವಾದ ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ನೀಡಿ 01 ವೇತನ ಬಡ್ತಿ ನೀಡುವ ಹಾಗೂ ಶಿಕ್ಷಕರಿಗೆ ಬಡ್ತಿ ಹೊಂದಿ ಕಡಿಮೆ ಸಂಬಳ ಪಡೆಯುವ ಅವರಿಗೆ ಆರ್ಥಿಕ ಹಾನಿ ತಪ್ಪಿಸುವ ಬಗೆಗಿನ ಈ ಎಲ್ಲಾ ಸಮಸ್ಯೆಗಳನ್ನು ಸರ್ಕಾರಿ ಶಾಲೆಗಳು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ಬಂದಿದೆ.</td></tr>
</table>

| | | |
|---|---|---|
| ಇ) | ಬಂದಿದ್ದಲ್ಲಿ ಈ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮವೇನು? | • ವಿದ್ಯಾರ್ಥಿಗಳ ಅನುಪಾತಕ್ಕೆ ಅನುಗುಣವಾಗಿ ವಿಭಾಗ ತೆರೆಯುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.<br>• ಪ್ರೌಢ ಶಾಲಾ ಸಿಬ್ಬಂದಿ ಮಾದರಿ ರಚನೆಯನ್ವಯ ಪ್ರೌಢಶಾಲೆಗಳಿಗೆ ಮುಖ್ಯ ಶಿಕ್ಷಕರ ಹುದ್ದೆ ಸೃಜಿಸಲಾಗಿದೆ ಮತ್ತು ಮಂಜೂರಾದ ಹುದ್ದೆಗೆ ನಿಯಮಾನುಸಾರ ಮತ್ತು ಸಂದರ್ಭಾನುಸಾರ ಪ್ರಭಾರೆ ಭತ್ಯೆ ನೀಡಲಾಗುತ್ತಿದೆ.<br>• 2016-17ನೇ ಸಾಲಿನಲ್ಲಿ ಸಹಶಿಕ್ಷಕರ ವೃಂದದಿಂದ ಮುಖ್ಯ ಶಿಕ್ಷಕರ ವೃಂದಕ್ಕೆ 247 ಹುದ್ದೆಗಳಿಗೆ ಪದೋನ್ನತಿ ನೀಡಲಾಗಿದೆ. ಪ್ರಸ್ತುತ ಮಾನ್ಯ ಸರ್ವೋಚ್ಚ ನ್ಯಾಯಾಲದಲ್ಲಿ ದಾಖಲಾಗಿರುವ ಬಿ.ಕೆ.ಪವಿತ್ರ ಪ್ರಕರಣದ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.<br>• ವರ್ಗಾವಣೆಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲಾಗಿದ್ದು, ಅದರನ್ವಯ ಕ್ರಮವಹಿಸಲಾಗುತ್ತಿದೆ.<br>• ಬೋಧಕ ಸಿಬ್ಬಂದಿಗಳನ್ನು ಅನ್ಯ ಕಾರ್ಯಗಳಿಗೆ ನಿಯೋಜಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.<br>• ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 31 ಎಸ್.ಆರ್.ಪಿ 2007 ದಿನಾಂಕ:29.08.2008 ರನ್ವಯ ದಿನಾಂಕ: 01.08.2008 ರಂದು ಅಥವಾ ನಂತರ ನೇಮಕಗೊಂಡ ಪ್ರಾಥಮಿಕ ಶಾಲಾ ಶಿಕ್ಷಕರು/ಪ್ರೌಢಶಾಲಾ ಶಿಕ್ಷಕರು ಮತ್ತು ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರುಗಳು ಮಾಸಿಕ ವಿಶೇಷ ಭತ್ಯೆ ಪಡೆಯಲು ಅರ್ಹರಿರುವುದಿಲ್ಲ. |

ಸಂಖ್ಯೆ: ಇಡಿ 300 ಎಲ್‌ಬಿಪಿ 2018)

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ